# ಹಿರಿಯ ದಿವಾಣಿ ನ್ಯಾಯೂಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯೂಲಯ, ಕಲಘಟಗಿ

## ಸಿಸಿ ನಂ 55/2021

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 15-01-2025 ರಂದು ಪ್ರಮಾಣ ಮಾಡಿಸಲಾಯಿತು

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಪ್ರಕಾಶ | ಪ್ರಾ.ಸಾ ಃ 03 |
| ತಂದೆ ಃ ಗಂಡ ಹೆಸರು | ಃ | ಯಲ್ಲವ್ವ ಯರಗುಂಟಿ | ಚಾ.ಸಾ ಃ 03 |
| ವಯಸ್ಸು | ಃ | 51 ವರ್ಷ | |
| ಉದ್ಯೋಗ | ಃ | ಹೆಡ್ ಮೆಸಂಜರ್ ಎಸ್ ಎಸ್ ಬಿ ಐ ಹುಬ್ಬಳ್ಳಿ | |
| ವಾಸಸ್ಥಳ | ಃ | ಹುಬ್ಬಳ್ಳಿ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

2012 ರಿಂದ 2021 ರವರೆಗೆ ಕಲಘಟಗಿಯ ಎಸ್ ಬಿ ಎಂ ಶಾಖೆಯಲ್ಲಿ ಸ್ವೀಪರ ಕಂ ಪ್ಯೂನ ಎಂದು ಕರ್ತವ್ಯನಿರ್ವಹಿಸಿರುತ್ತೇನೆ.

ದಿನಾಂಕ 21.05.2017 ರಂದು ಕಲಘಟಗಿಯ ಎಸ್ ಬಿ ಎಂ ಶಾಖೆಯಲ್ಲಿ ಕರ್ತವ್ಯದಲ್ಲಿದ್ದಾಗ ಪೋಲೀಸರು ಶಾಖೆಗೆ ಭೇಟಿ ನೀಡಿದ್ದು ಕಾರ ಲೋನಗೆ ಸಂಬಂಧಿಸಿದಂತೆ ಮೋಸ ಹಾಗೂ ವಂಚನೆ ವ್ಯವಹಾರ ಆಗಿದ್ದು ಅದಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರಿಗೆ ಬಂದಿದ್ದೇವೆ ಎಂದು ಹೇಳಿ ಈಗ ತೋರಿಸಲಾದ ಪಂಚನಾಮೆಗೆ ಪೋಲೀಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಸಾ-2 ಹಾಗೂ 1 ರವರು ಹಾಜರಿದ್ದರು. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೋಲೀಸರು ನಿಪಿ-15 ರಂತೆ ಪಂಚನಾಮೆ ಜರುಗಿಸಿರುತ್ತಾರೆ. ಮಧ್ಯಾಹ್ನ 3-15 ರಿಂದ 4-15 ರವರೆಗೆ ಜರುಗಿಸಿರುತ್ತಾರೆ. ಕಲಘಟಗಿಯ ಎ ಪಿ ಎಂ ಸಿ ಕ್ರಾಸ್ ಹತ್ತಿರ ಶಾಖೆ ಇರುತ್ತದೆ. ಪಂಚನಾಮೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ನಮ್ಮ ಬ್ಯಾಂಕಿಗೆ ಬಂದು ಹೋಗುತ್ತಿದ್ದ 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಪಂಚನಾಮೆ ಹೊರತು ಪಡಿಸಿ ನನಗೆ ಬೇರೆ ವಿಷಯ ಗೊತ್ತಿಲ್ಲ. ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರ ಮುಂದೆ ಯಾವುದೆ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿಲ್ಲ.

*(ಮಾನ್ಯ **ಸ.ಸ.ಅ** ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು* ಭಾಗಶಃ *ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,* ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

2015 ರಲ್ಲಿ 1 ಮತ್ತು 2 ನೇ ಆರೋಪಿತರು ನಮ್ಮ ಬ್ಯಾಂಕ ಶಾಖೆಗೆ ಮೇಲಿಂದ ಮೇಲೆ ಕಾರ ಲೋನ ಪಡೆದುಕೊಳ್ಳುವ ಸಲುವಾಗಿ ಬಂದು 3 ನೇ ಆರೋಪಿಯ ಕಚೇರಿಯಲ್ಲಿ ಬಹಳ ಹೊತ್ತು ಕುಳುತುಕೊಳ್ಳುತ್ತಿದ್ದ ಎಂದರೆ ನಿಜ. ಕಾರ

ಲೋನಸಲುವಾಗಿ ತನ್ನ ಜೊತೆಗೆ 1ನೇ ಆರೋಪಿ ಲೋನಪಡೆಯುವ ಸಲುವಾಗಿ ಬೇರೆ ಬೇರೆ ಜನರನ್ನು ಕೂಡಾ ಕರೆದುಕೊಂಡು ಬರುತ್ತಿದ್ದ ಹಾಗೂ ಬೇರೆಯವರಿಗೆ ಜಾಮೀನದಾರನಾಗಿ ಕಾರ ಲೋನ ಕೊಡಿಸಿರುತ್ತಾನೆ ಹಾಗೂ ತಾನು ಸ್ವತಃ ಕಾರ ಲೋನ ಪಡೆದುಕೊಂಡಿರುತ್ತಾನೆ ಎನ್ನುವದು ನನಗೆ ಗೊತ್ತಿಲ್ಲ. 1ನೇ ಆರೋಪಿ ಜಾಮೀನುದಾರರನ್ನು ಬ್ಯಾಂಕಿಗೆ ಕರೆದುಕೊಂಡು ಬರುತ್ತಿದ್ದ ಎನ್ನುವದು ನನಗೆ ಗೊತ್ತಿಲ್ಲ. 1ನೇ ಆರೋಪಿ ಕಾರ ಖರೀದಿಸುವ ಉದ್ದೇಶದಿಂದ ಲೋನ ಮಂಜೂರ ಮಾಡುವ ಸಲುವಾಗಿ ಆರ್ ಎನ್ ಎಸ್ ಮೋಟರ್ಸ ಹುಬ್ಬಳ್ಳಿ ಇವರ ಕೋಟೇಷನ ದಾಖಲೆ ಹಾಗೂ ಭಾಗ್ಯಲಕ್ಷ್ಮಿ ಮೋಟರ್ಸ ಹೋಸಪೇಟೆ ಇವರಲ್ಲಿ ಮಾರ್ಜಿನ ಹಣ ತುಂಬಿದ ಬಗ್ಗೆ ಖೊಟ್ಟಿ ರಶೀದಿಗಳನ್ನು ಸಲ್ಲಿಸಿದ್ದು 3ನೇ ಆರೋಪಿಯು 1ನೇ ಆರೋಪಿಯೊಂದಿಗೆ ಮಿಲಾಪಿಯಾಗಿ ದಾಖಲೆಗಳನ್ನು ಪರಿಶೀಲನೆ ಮಾಡದೆ, ದಾಖಲೆಗಳು ಖೊಟ್ಟಿಯಾಗಿರುತ್ತವೆ ಎಂದು ಗೊತ್ತಿದ್ದರೂ ಕೂಡಾ ಬ್ಯಾಂಕಿನ ನಿಯಮಾವಳಿಗಳನ್ನು ಉಲ್ಲಂಘಟನೆ ಮಾಡಿ 1ನೇ ಆರೋಪಿಗೆ ಎಸ್ ಬಿ ಐ ಲೈಫ್ ಇನ್ಸೂರೆನ್ಸ ಪಾಲಸಿ ಮಾಡಿಕೊಂಡು ಬ್ಯಾಂಕಿನಿಂದ ಇನಸೆಂಟಿವ ಹಣ ಪಡೆದುಕೊಂಡು ವಯಕ್ತಿಕ ಲಾಭ ಪಡೆದುಕೊಳ್ಳಲು ಹಾಗಾ ಬ್ಯಾಂಕಿಗೆ ವಂಚಿಸುವ ಉದ್ದೇಶದಿಂದ ದಿನಾಂಕ 25.04.2015 ರಂದು ರೂ 4,00,000/- ಗಳನ್ನು 1ನೇ ಆರೋಪಿ ಬ್ಯಾಂಕ ಶಾಖೆಯ ಖಾತಾ ನಂ 64168389215 ನೇದ್ದಕ್ಕೆ ಜಮಾ ಮಾಡಿ ನಂತರ ಸದರಿ ಹಣವನ್ನು ಧಾರವಾಡ ಕಾರ್ಪೋರೇಷನ ಬ್ಯಾಂಕನಲ್ಲಿರುವ ಭಾಗ್ಯಲಕ್ಷ್ಮಿ ಮೋಟರ್ಸ ಪ್ರೋಪರೈಟರ 2ನೇ ಆರೋಪಿ ಈತನ ಚಾಲ್ತಿ ಖಾತೆ ನಂ 306201601150002 ನೇದ್ದಕ್ಕೆ ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ ಮಾಡಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. 1ನೇ ಆರೋಪಿಯು ಕಾರ ಸಾಲ ಮಂಜೂರು ಮಾಡಿಕೊಂಡಿದ್ದರೂ ಕೂಡಾ ಕಾರನ್ನು ಖರೀದಿಸದೆ ಸಾಲದ ಹಣವನ್ನು ಬ್ಯಾಂಕಿಗೆ ಮರುಪಾವತಿ ಮಾಡದೆ ಆರೋಪಿತರು ಇಬ್ಬರೂ ಕೂಡಿಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡು ಬ್ಯಾಂಕಿಗೆ ನಷ್ಟ ಪಡಿಸಿ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ತನಿಖಾಧಿಕಾರಿ ಮುಂದೆ ನಿಪಿ-16 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ದೂರು ನೀಡಿದ್ದು, ತನಿಖಾಧಿಕಾರಿಗಳು ನನ್ನನ್ನು ವಿಚಾರಿಸಿ ದಿನಾಂಕ 05.05.2019 ರಂದು ನಿಪಿ-17 ರಂತೆ ಮರು ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 3ನೇ ಆರೋಪಿ ನಮ್ಮ ಹಿಂದಿನ ಬ್ಯಾಂಕ ವ್ಯವಸ್ಥಾಪಕರು ಆದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಆರೋಪಿ ಪರಃ**

*(1ನೇ ಆರೋಪಿ ಹಾಜರಿದ್ದು ತಮ್ಮ ವಕೀಲರು ಬಂದಿರುವುದಿಲ್ಲ ಎಂದು ಹೇಳಿ ಕಾಲಾವಕಾಶ ಕೋರಿದ್ದು, ಸಾಕ್ಷಿ ಪಾಟೀ ಸವಾಲು ಮುಂದೂಡಲು ಯಾವುದೆ ಕಾರಣ ಇರುವುದಿಲ್ಲ ಆದದರಿಂದ 1ನೇ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)*

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಎನ್ ಎಸ್ ಯು ವಕೀಲರಿಂದಃ</u>**

ನಾನು ಎಸ್ ಬಿ ಎಂ ಶಾಖೆ ಕಲಘಟಗಿಯಲ್ಲಿ ಸ್ಥಾಪನೆ ಆದಾಗಿನಿಂದ ಅಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ನಿಜ. ನಮ್ಮ ವ್ಯವಸ್ಥಾಪಕರು ಹೇಳಿದಂತೆ ದಾಖಲೆಗಳನ್ನು ಅವರಿಗೆ ಒದಗಿಸುತ್ತೇನೆ ಎಂದರೆ ನಿಜ. ಪೋಲೀಸರು ಪಂಚನಾಮೆ ಸಲುವಾಗಿ ನನಗೆ ನೋಟೀಸ ಕೊಟ್ಟಿಲ್ಲ. ಪಂಚನಾಮೆಯನ್ನು ನಿಖರವಾಗಿ ಯಾರು ಬರೆದಿದ್ದಾರೆ ಎಂದು ಹೇಳಲು ಬರುವುದಿಲ್ಲ. ಪಂಚನಾಮೆಗೆ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ನಿಜ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಹೇಳಲು ಬರುವುದಿಲ್ಲ. ಬ್ಯಾಂಕ ಶಾಖೆಯಲ್ಲಿ ಸಿ ಸಿ ಟಿ ವಿ ಕ್ಯಾಮರಾ ಅಳವಡಿಸಲಾಗಿದೆ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.